ಅವಳಿಗೆ ತಂದೆತಾಯಿಯ ಪ್ರೀತಿವಾತ್ಸಲ್ಯ ಮತ್ತು ಅನುಬಂಧದ ಬಗ್ಗೆ ಗೊತ್ತಿರಲಿಲ್ಲ. ಮಾವನ ಭಯದ ಗೂಡಿನಲ್ಲಿ ಬೆಳೆದ ಈ ಮಲ್ಲಿಗೆಗೆ ಬುದ್ಧಿ ತಿಳಿದಾಗಲಿಂದ ಸ್ಮಶಾನದಲ್ಲಿ ಸಾಧನೆ ಮಾಡಿದ್ದ ಹೆಣ್ಣಿಗೆ ಅನುಕಂಪ ಇರಲಿಲ್ಲ. ಪ್ರೀತಿ ಅಂದರೇನು ಗೊತ್ತಿರಲಿಲ್ಲ. ಮಾವನೇ ಅವಳನ್ನು ನಿಯಂತ್ರಿಸಿದ್ದ. ಅವಳ ಮನಸ್ಸಿನಲ್ಲಿ ಕಪ್ಪು ಛಾಯೆ ಮೂಡಿಸಿದ್ದ.

'ಮಾತಾಡು ಮಲ್ಲಿಗೆ'

ಮಲ್ಲಿಗೆ ದೃಢವಾದ ಸ್ವರದಲ್ಲಿ 'ನೀವು ಹೇಳಿದಂತೆ ಕೇಳುತ್ತೇನೆ'

ರುದ್ರನಾಗ ಸಂತೋಷ, ಉದ್ವೇಗದಿಂದ ಅವಳನ್ನು ತಬ್ಬಿಕೊಂಡು ತಲೆ ಮತ್ತು ಬೆನ್ನನ್ನು ಸವರುತ್ತಾ 'ಇನ್ನು ಮುಂದೆ ನೀನು... ನೀನು ನನ್ನ ಮಗಳಾಗಿ ಬೆಳೆಯಬೇಕು. ನಿನಗೆ ಇನ್ನು ಮುಂದೆ ಹೊಡೆಯುವುದಿಲ್ಲ, ಬೈಯುವುದಿಲ್ಲ.' ಈಗ ಅವಳಲ್ಲಿ ಏನೋ ಒಂದು ರೀತಿಯ ರೋಮಾಂಚನದ ಸಿಂಚನ ಉಂಟಾಯಿತು. ಮಾವನಿಂದ ಯಮಹಿಂಸೆ ಅನುಭವಿಸುತ್ತಿದ್ದ ಅವಳಿಗೆ ಇದು ಅಮೃತಸಿಂಚನ ಉಂಟು ಮಾಡಿದೆ. ಮಾವ ಇದೇ ರೀತಿ ಪ್ರೀತಿವಾತ್ಸಲ್ಯ ತೋರಿಸುವುದಾದರೆ ನಾನು ಅವರು ಹೇಳಿದಂತೆ ಕೇಳುತ್ತೇನೆ ಎಂದು ಅಂದುಕೊಂಡಳು.

ಇದೇ ರುದ್ರನಾಗನ ಬುದ್ಧಿವಂತಿಕೆ. ಅದೇ ತಾನೇ ಅಲ್ಲಿಗೆ ಬಂದ ಮಾಂತ್ರಿಕ ಮದಂತ ಅವಳನ್ನು ಕೊನೆಯ ಪ್ರಯೋಗದ ಅಭ್ಯಾಸ ಮಾಡಿಸಲು ಕರೆದುಕೊಂಡು ಹೋದ. ಮಲ್ಲಿಗೆ ಉತ್ಸಾಹದಿಂದ ಹೊರಟಳು. ರುದ್ರನಾಗ ಈಗ ತುಂಬಾ ವರ್ಷಗಳಿಂದ ರಹಸ್ಯವಾಗಿ ಇರಿಸಿದ್ದ ಎರಡು ವಸ್ತುಗಳನ್ನು ಹೊರಗೆ ತೆಗೆದ.

ಮನೋಹರ ಉಪಯೋಗಿಸುತ್ತಿದ್ದ ಕಾಲುಚೀಲ (ಸಾಕ್ಸ್). ಅದು ಜೀರ್ಣವಾಗಿ ಗಬ್ಬುವಾಸನೆ ಬರುತ್ತಿತ್ತು. ಅರುಂಧತಿ ಬಿಟ್ಟು ಹೋಗಿದ್ದ ವ್ಯಾನಿಟಿ ಬ್ಯಾಗಿನಲ್ಲಿ ಬಾಚಣಿಗೆ ಇತ್ತು. ಅದರಲ್ಲಿ ಅವಳ ತಲೆಯ ಕೂದಲುಗಳು ಸೇರಿಕೊಂಡಿದ್ದವು. ಅದನ್ನೂ ಸಹ ಹೊರ ತೆಗೆದ.

ರುದ್ರನಾಗ ನಗಲಾರಂಭಿಸಿದ. ಅಮಾವಾಸ್ಯೆಯ ದಿನ ನಿನ್ನ ಮಗಳಿಂದಲೇ ನಿನ್ನ ಮೇಲೆ ಕ್ರೂರ ರೀತಿಯ ಕ್ಷುದ್ರಶಕ್ತಿಯನ್ನು ಪ್ರಯೋಗಿಸುತ್ತೇನೆ ಎಂದು ಮನದಲ್ಲೇ ಅಂದುಕೊಂಡ.

ಮನೋಹರ... ಮೊದಲು ನಿನ್ನ ಮೇಲೆ ಪ್ರಯೋಗ. ನಂತರ ನಿನ್ನ ಹೆಂಡತಿಯ ಮೇಲೆ. ನೀನು ಪರದೇಶದಲ್ಲಿ ಅಲ್ಲ, ಪಾತಾಳದಲ್ಲೇ ಅಡಗಿದ್ದರೂ ಸಹ ಸಾವು ತಪ್ಪುವುದಿಲ್ಲ.

* * *

ಅದು ರೋಸ್‌ಗಾರ್ಡನ್. ನೂರಾರು ಗುಲಾಬಿ ಗಿಡಗಳು. ಅಲ್ಲಿ ಬೆಳೆದಿವೆ. ಹೂವುಗಳ ಸೌಂದರ್ಯ ಸವಿಯಲು ಇಲ್ಲಿಗೆ ನಗರದ ಜನರು ಸಂಜೆ ಹೊತ್ತು ಬರುತ್ತಾರೆ.

ಅಲ್ಲಿ... ಮೂಲೆಯಲ್ಲಿ ದೊಡ್ಡ ಗುಲಾಬಿ ಗಿಡದ ಕೆಳಗೆ ಅವರಿಬ್ಬರು ಕುಳಿತಿದ್ದಾರೆ. ಕಾವ್ಯ ಸುರೇಂದ್ರ. ಸುರೇಂದ್ರ ಅವಳ ಮುಖವನ್ನೇ ತದೇಕದೃಷ್ಟಿಯಿಂದ ನೋಡುತ್ತಿದ್ದಾನೆ. ಅವನ ಕಣ್ಣುಗಳಲ್ಲಿ ಆರಾಧನೆ ತುಂಬಿದೆ. ಅವಳಿಗೆ ಪುಳಕ ಉಂಟಾಯಿತು.

ಕಾವ್ಯ ನಗುತ್ತಲೇ 'ರೆಪ್ಪೆಯಾಡಿಸದೆ ನನ್ನ ಮುಖ ನೋಡುತ್ತಿದ್ದೀಯಲ್ಲ. ಅದರಲ್ಲಿ ಏನಿದೆ? ನಾನೇನು ಐಶ್ವರ್ಯರೈ ತರಹ ಸುಂದರಿಯಲ್ಲ.'

ಸುರೇಂದ್ರ 'ನಾನು ಪ್ರೀತಿಸುತ್ತಿರುವುದು ಐಶ್ವರ್ಯರೈ ಅನ್ನು ಅಲ್ಲ. ಪ್ರೀತಿಗೆ ಬಾಹ್ಯರೂಪ ಮುಖ್ಯ ಅಲ್ಲ' ಅವಳು ಸರ್ರನೆ ಅವನ ಕಡೆ ನೋಡಿದಳು. ಅವನ ಕಣ್ಣುಗಳಲ್ಲಿ ಒಲವಿನ ಮಹಾಪೂರವೇ ತುಂಬಿದೆ. ಅವನ ಈ ಪ್ರೀತಿಯ ತೀವ್ರತೆಯನ್ನು ಕಂಡು ರೋಮಾಂಚನವಾಯಿತು. ಸುರೇಂದ್ರ ಅವಳ ಕೈಯನ್ನು ಸವರುತ್ತಾ 'ಕಾವ್ಯ ನನ್ನಂಥ ಬಡವನ ಮೇಲೆ ನಿನ್ನ ತಂದೆ ಕನಿಕರ ತೋರಿಸಿದರು. ನನ್ನ ವಿದ್ಯಾಭ್ಯಾಸಕ್ಕೆ ಸಹಾಯ ಮಾಡಿ ನನ್ನ ಬದುಕನ್ನು ರೂಪಿಸಿದರು.' ಅವಳು 'ಸುರೇಂದ್ರ ಅದಕ್ಕೆ ಕಾರಣ ನಿನ್ನಲ್ಲಿ ಇರುವ ಒಳ್ಳೆಯ ಗುಣ'. ಸುರೇಂದ್ರ ಅವಳ ಮುಖವನ್ನು ತನ್ನ ಎರಡು ಕೈಗಳಿಂದ ಹಿಡಿದು 'ನಿನ್ನಂಥ ಶ್ರೀಮಂತ ಹೆಣ್ಣನ್ನು ಮದುವೆಯಾಗಲು ಅಮೆರಿಕದ ಗಂಡುಗಳು ಭಾರತದ ಶ್ರೀಮಂತ ಯುವಕರು ಕಾತರಿಸುತ್ತಿದ್ದಾರೆ. ಆದರೆ ನೀನ್ಯಾಕೆ ನನ್ನನ್ನು ಮೆಚ್ಚಿಕೊಂಡೆ?'

ಕಾವ್ಯ ಕಣ್ಣು ಮಿಟುಕಿಸಿ ನಗುತ್ತಾ 'ಯಾಕೆ ಅಂದರೆ ನಾನು ನಿನ್ನನ್ನು ಪ್ರೀತಿಸುತ್ತಿರುವುದರಿಂದ ಐ ಲವ್ ಯೂ.' ಸುರೇಂದ್ರ ಭಾವುಕತೆಯಿಂದ 'ಕಾವ್ಯ... ಹೇಳು... ಹೇಳು ನಿನ್ನ ಪ್ರೀತಿಗೆ ಪ್ರತಿಯಾಗಿ ನಾನೇನು ಕೊಡಲಿ ಅಂತ.' 'ಪ್ರೀತಿ... ನಿನ್ನ ಪರಿಶುದ್ಧ ಪ್ರೀತಿಯನ್ನು ನನಗೆ ಕೊಡು ಸುರೇಂದ್ರ'

ಸುರೇಂದ್ರ ಸುತ್ತಲೂ ಒಂದು ಸಲ ನೋಡಿ ಅವಳ ತುಟಿಗಳ ಮೇಲೆ ಚುಂಬಿಸಿದ. ಕಾವ್ಯ ಅವನನ್ನು ತನ್ನ ಮೇಲೆ ಎಳೆದುಕೊಳ್ಳುತ್ತಾ 'ಸುರೇಂದ್ರ... ನೀನು ಸಿನಿಮಾ ಹೀರೊ ತರಹ ತುಂಬಾ ಹ್ಯಾಂಡ್‌ಸಮ್ ಆಗಿದ್ದೀಯ. ನನಗೆ ಭಯವಾಗುತ್ತದೆ.'

ಅವಳನ್ನು ಚುಂಬಿಸುತ್ತಾ 'ಭಯಾನಾ... ಯಾಕೆ?'

'ನಿನ್ನನ್ನು ಬೇರೆ ಯಾವುದಾದರೂ ಹೆಣ್ಣು ಹೊಡೆದುಕೊಂಡು ಹೋದರೇನು ಗತಿ?'

ಸುರೇಂದ್ರ ನಗುತ್ತಲೇ 'ನಿನಗೆ ನನ್ನ ಬಗ್ಗೆ ಅಂಥ ಅಪನಂಬಿಕೆ ಇದ್ದರೆ ಬೇಗ ಮದುವೆ ಮಾಡಿಕೊಂಡು ಬಿಡೋಣ.' 'ಡ್ಯಾಡಿ ಕಲ್ಯಾಣ ಮಂಟಪ ಬುಕ್ ಮಾಡಿ ಅದ್ದೂರಿಯಿಂದ ಮದುವೆ ಮಾಡುತ್ತಾರಂತೆ. ನಗರದಲ್ಲಿ ಒಳ್ಳೆಯ ಕಲ್ಯಾಣ ಮಂಟಪ ಬೇಕು ಅಂದರೆ ತಿಂಗಳುಗಳು ಕಾಯಬೇಕು' ಎನ್ನುತ್ತಾಳೆ ಕಾವ್ಯ.

ಸುರೇಂದ್ರ 'ಸರಳ ರೀತಿಯ ಮದುವೆಗೆ ನಿನ್ನ ತಂದೆತಾಯಿಯನ್ನು ಒಪ್ಪಿಸು'

ಕಾವ್ಯ 'ಒಬ್ಬಳೇ ಮಗಳು ನಾನು. ನನ್ನ ಮದುವೆಯನ್ನು ವೈಭವದಿಂದ ಮಾಡಬೇಕು ಅಂತ ಕನಸು ಕಾಣುತ್ತಿರುವ ಅವರು ಒಪ್ಪುವುದಿಲ್ಲ'.

'ಹಾಗಾದರೆ ಕಾಯಲೇಬೇಕು...'

ಕಾವ್ಯ ಅವನ ಎದೆಯನ್ನು ಸವರುತ್ತಾ 'ಯಾಕೆ ಅಂತ ಗೊತ್ತಿಲ್ಲ ಸುರೇಂದ್ರ. ನಿನ್ನನ್ನು ಕಳೆದುಕೊಳ್ಳುತ್ತೇನೋ ಎಂಬ ಭಯ ಕಾಡುತ್ತಿದೆ'

'ನಿನ್ನ ಭಯಕ್ಕೆ ಕಾರಣ ಏನು?'

'ಗೊತ್ತಿಲ್ಲ ಸುರೇಂದ್ರ'

ಸುರೇಂದ್ರ 'ನಿನಗೆ ಆ ರೀತಿ ಭಯ ಇದ್ದರೆ ನಾವಿಬ್ಬರೂ ರಿಜಿಸ್ಟರ್ ಮ್ಯಾರೇಜ್ ಆಗೋಣ'.

ಗಾಬರಿಯಿಂದ 'ಡ್ಯಾಡಿ ಇದಕ್ಕೆ ಒಪ್ಪುವುದಿಲ್ಲ. ಅಮ್ಮಾ ಅಂತೂ ಗಲಾಟೆ ಮಾಡುತ್ತಾಳೆ'.

ಸುರೇಂದ್ರ 'ಅವರಿಗೆ ತಿಳಿಸೋದು ಬೇಡ. ಈ ರೀತಿ ಮದುವೆ ಆಗುತ್ತಿರುವುದು ನಿನ್ನ ಮನಸ್ಸಿನ ಸಮಾಧಾನಕ್ಕಾಗಿ ಮಾತ್ರ. ನೀನು ಒಪ್ಪಿಕೊಂಡರೆ ಉಳಿದ ವ್ಯವಸ್ಥೆ ನಾನು ಮಾಡುತ್ತೇನೆ.'

ಕಾವ್ಯ ಸ್ವಲ್ಪ ಹೊತ್ತು ಆಲೋಚಿಸಿದ ನಂತರ ತನ್ನ ಒಪ್ಪಿಗೆ ನೀಡಿದಳು.

* * *

## ಸ್ಮಶಾನದಲ್ಲಿ ಮದಂತ-ಮಲ್ಲಿಗೆ

ಅದು ಸ್ಮಶಾನದ ನಡುಗಡ್ಡೆ. `ಗವ್' ಎನ್ನುವ ಕತ್ತಲು. ಆದರೆ ಒಂದೇ ಒಂದು ಕಡೆ ಮಾತ್ರ ಬೆಂಕಿಯ ಬೆಳಕು ಇದೆ. ಅದೇ ಅಗ್ನಿಕುಂಡ. ಮದಂತ ಮತ್ತು ಮಲ್ಲಿಗೆ ಎದುರು ಬದುರಾಗಿ ನಿಂತಿದ್ದಾರೆ. ಅವರಿಬ್ಬರೂ ರುಂಡಗಳ ಹಾರವನ್ನು ಹಾಕಿಕೊಂಡಿದ್ದಾರೆ. ರಕ್ತದ ತಿಲಕ ಇರಿಸಿಕೊಂಡಿದ್ದಾರೆ. ಅಗ್ನಿಕುಂಡದ ಮುಂದೆ ತುಸು ದೂರದಲ್ಲಿ ಕೋಳಿಗಳು ಸತ್ತು ಬಿದ್ದಿವೆ. ರಕ್ತದ ಹನಿಗಳು ಹರಡಿವೆ. ಮದಂತ ಅವಳಿಗೆ ಪಾತಾಳ ಭೈರವಿ ಪ್ರಯೋಗದ ಕೊನೆಯ ಅಂಕ ಹೇಳಿಕೊಡುತ್ತಿದ್ದಾನೆ.

ಒಂದು ಗಂಟೆ ಕಳೆಯಿತು. ಉಪಸಂಹಾರ ಮುಗಿಯಿತು. ಮದಂತ ಗಂಭೀರವಾಗಿ 'ಮಲ್ಲಿಗೆ... ನನ್ನ ಗುರು ನನಗೆ ಕಲಿಸಿದ್ದನ್ನು ನಿನಗೆ ಕಲಿಸಿದ್ದೇನೆ.'

ಮಲ್ಲಿಗೆ ಅವನಿಗೆ ಮಾಂತ್ರಿಕ ಪದ್ಧತಿಯಲ್ಲಿ ನೆಲಮುಟ್ಟಿ ನಮಸ್ಕರಿಸಿದಳು. ಇಬ್ಬರೂ ಬೇರೆ ವಸ್ತ್ರಗಳನ್ನು ಧರಿಸಿದರು. ಈಗ ಮದಂತ 'ಮಲ್ಲಿಗೆ ನಿನಗೆ ಈ ವಿದ್ಯೆಯನ್ನು ಕಲಿಸಲು ಕಾರಣ ಏನು ಗೊತ್ತೆ? ರುದ್ರನಾಗನಿಗೆ ನಾನು ಗುರುದಕ್ಷಿಣೆ ನೀಡಿರಲಿಲ್ಲ. ರುದ್ರನಾಗ ಇದನ್ನೇ ನನ್ನಿಂದ ಗುರುದಕ್ಷಿಣೆಯಾಗಿ ಬೇಡಿದರು. ಮಾತಿಗೆ ತಪ್ಪಲಾರದೆ ಒಪ್ಪಿಕೊಂಡೆ. ಅದರಂತೆ ನನ್ನ ಕರ್ತವ್ಯ ಮಾಡಿದ್ದೇನೆ'.

ಇದಕ್ಕೆ ಅವಳಿಂದ ಯಾವ ರೀತಿಯ ಪ್ರತಿಕ್ರಿಯೆಯೂ ಬರಲಿಲ್ಲ.

ಮದಂತ 'ನಾನು ಯಾವತ್ತೋ ಈ ಊರನ್ನು ಬಿಟ್ಟು ಹೋಗಬೇಕು ಅಂತ ಅಂದುಕೊಂಡಿದ್ದೆ. ಈಗ ಅದಕ್ಕೆ ಮುಹೂರ್ತ ಕೂಡಿ ಬಂದಿದೆ.'

ಬೆಚ್ಚಿಬಿದ್ದಳು ಮಲ್ಲಿಗೆ. ನಿರಾಸೆ, ಗಾಬರಿಯಿಂದ 'ಅಂದರೆ... ಅಂದರೆ ನೀವು ಈ ಊರಿನಿಂದ ಹೋಗುತ್ತೀರಾ?' ತಲೆಯಾಡಿಸಿದ ಮದಂತ, ಅವಳು ದುಃಖದಿಂದ ಕಂಬನಿ ಮಿಡಿಯುತ್ತಾ ಎರಡು ಕೈಗಳನ್ನು ಜೋಡಿಸಿ 'ನನಗಾಗಿ ಇರಲು ಸಾಧ್ಯವಿಲ್ಲವೆ?'

'ಇಲ್ಲ... ಇರಲಾರೆ...'

'ಈ ಊರಿಂದ ಹೋಗಲು ಕಾರಣ ಏನು?' ಎಂದು ಅವನ ಕೈ ಹಿಡಿದುಕೊಂಡಳು. ಮದಂತ ಅವಳಿಗೆ ಕಾರಣ ಹೇಳಲಿಲ್ಲ. ಮಲ್ಲಿಗೆಯನ್ನು ಮುಂದೆ ರುದ್ರನಾಗ ಅವಳ ತಂದೆತಾಯಿಯ ವಿರುದ್ಧ ಮಾಂತ್ರಿಕ ಯುದ್ಧಕ್ಕೆ ಪ್ರಚೋದನೆ